# ಕುವೆಂಪು ವಿಶ್ವವಿದ್ಯಾಲಯ

## ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in



Re-Accredited by NAAC with 'A' Grade, Ranked 73rd Place in NIRF- 2019 and Secured 45th Place in SCIMAGO Institutional Rankings


ಸಂಖ್ಯೆ: ಕುವಿ/ಪವಿ/ಪಿಸಿ/ 6948 /2022-23 ದಿನಾಂಕ:05-11-2022.

## ಪ್ರಕಟಣೆ

**ವಿಷಯ: ನವೆಂಬರ್ - 2022ರಲ್ಲಿ ಜರುಗಲಿರುವ ಬಿ.ಪಿ.ಇಡಿ, ಪದವಿಯ ದ್ವಿತೀಯ ಸೆಮಿಸ್ಟರ್ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಬಗ್ಗೆ.**

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:05-11-2022**

*****

**ನವೆಂಬರ್ - 2022ರ** ಮಾಹೆಯಲ್ಲಿ ನಡೆಯಲಿರುವ **ಬಿ.ಪಿ.ಇಡಿ,** ಪದವಿಯ 2ನೇ ಸೆಮಿಸ್ಟರ್‌ನ (**Freshers & Repeaters**) ಲಿಖಿತ ಪರೀಕ್ಷೆಗಳು **ದಿನಾಂಕ: 15-11-2022ರಿಂದ** ಪ್ರಾರಂಭವಾಗುತ್ತವೆ. UUCMS ತಂತ್ರಾಂಶದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾದ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಗಳನ್ನು ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಶುಲ್ಕ ಸಂದಾಯ ಮಾಡಿ ವಿಭಾಗಾಧ್ಯಕ್ಷರಿಗೆ ಸಲ್ಲಿಸಲು ತಿಳಿಸಲಾಗಿದೆ. (ಪುನರಾವರ್ತಿತ (**Repeaters**) ವಿದ್ಯಾರ್ಥಿಗಳಿಗೆ UUCMS ತಂತ್ರಾಂಶವು ಅನ್ವಯಿಸುವುದಿಲ್ಲ. ಆದರೆ, ಇಂತಹ ವಿದ್ಯಾರ್ಥಿಗಳು ಈ ಹಿಂದಿನ ಪದ್ಧತಿಯಂತೆ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸುವುದು)

ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸುವುದು, ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 6361532058/7022254993 ಸಂಪರ್ಕಿಸುವುದು. (ಕೊನೆಯ ದಿನಾಂಕದವರೆಗೆ ಅರ್ಜಿ ಸಲ್ಲಿಸಲು ಕಾಯದೇ ಮುಂಚಿತವಾಗಿಯೇ ಅನ್‌ಲೈನ್‌ನಲ್ಲಿ ಸಲ್ಲಿಸುವುದರಿಂದ ಅಂತ್ಯದಲ್ಲಿ ಉಂಟಾಗುವ ಸರ್ವರ್ ದಟ್ಟಣೆಯ ಅಡಚಣೆ ತಪ್ಪಿಸಬಹುದಾಗಿದೆ.)

| **ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು:** | | |
|---|---|---|
| 1 | ವಿಳಂಬ ಶುಲ್ಕವಿಲ್ಲದೆ | 08-11-2022 ರವರೆಗೆ |
| 2 | ವಿಳಂಬ ಶುಲ್ಕ ರೂ. 100=00ರಂತೆ | 10-11-2022 ರವರೆಗೆ |
| 3 | ವಿಳಂಬ ಶುಲ್ಕ ರೂ. 500=00ರಂತೆ | 12-11-2022 ರವರೆಗೆ |
| ❖ | **ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು ದಿನಾಂಕ: 13-11-2022 ರಿಂದ 14-11-2022ರೊಳಗೆ ಮುದ್ರಿಸಿಕೊಳ್ಳಬೇಕು.** | |

| **ಶುಲ್ಕದ ವಿವರಗಳು** | | |
|---|---|---|
| 1. | **ಪೂರ್ಣ ಪರೀಕ್ಷೆಗೆ** | **ರೂ. 1065/-** |
| 2. | **ಪ್ರತಿ ಪತ್ರಿಕೆಗೆ**<br>**(ಆ ಸೆಮಿಸ್ಟರ್‌ನ ಎಲ್ಲಾ ಪತ್ರಿಕೆಗಳಿಗೆ ರೂ.1065/-ಒಳಪಟ್ಟು)** | **ರೂ. 240/-** |
| 3. | **ಪ್ರಾಯೋಗಿಕ ಪರೀಕ್ಷೆಗೆ** | **ರೂ. 130/-** |
| 4. | **ಅಂಕಪಟ್ಟಿ ಶುಲ್ಕ** | **ರೂ. 240/-** |

**ಪರೀಕ್ಷೆಗಳ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.**

| ದ್ವಿತೀಯ ಸೆಮಿಸ್ಟರ್ (**Freshers & Repeaters**) ಪರೀಕ್ಷೆಗಳು | | |
|---|---|---|
| **Time: 02.00pm to 05.00pm** | | |
| 1. | 15-11-2022 | Yoga Education |
| 2. | 17-11-2022 | Health Education and Environmental Studies |
| 3. | 19-11-2022 | Organization and Administration |
| 4. | 21-11-2022 | **Elective Course (Any One)**<br>Contemporary issues in Physical Education, Fitness and wellness.<br>Sports Nutrition and Weight Management |

## ವಿದ್ಯಾರ್ಥಿಗಳಿಗೆ ಸೂಚನೆ:

1. ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ onlineನಲ್ಲಿ ಅರ್ಜಿ ಸಲ್ಲಿಸಲು ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕ ವಿವರಗಳುಳ್ಳ ಪರೀಕ್ಷಾ ಅರ್ಜಿಯನ್ನು ಮುದ್ರಿಸಿ ನೆಟ್ ಬ್ಯಾಂಕಿಂಗ್‌ನಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ವಿಭಾಗಕ್ಕೆ ಸಲ್ಲಿಸಬೇಕು.

2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card / Credit Card / Net Banking / Paytm wallet ಮೂಲಕ ನೇರವಾಗಿ ವಿದ್ಯಾರ್ಥಿಯು ತಮ್ಮ ಬ್ಯಾಂಕ್ ಖಾತೆಯಿಂದ ಹಣ ಪಾವತಿಸಿ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ವಿಭಾಗಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ವಿಶೇಷ ಸೂಚನೆ:** ವಿದ್ಯಾರ್ಥಿಗಳು **Internet Browsing centre**ನ ಮಾಲಿಕರ ಬ್ಯಾಂಕ್‌ಖಾತೆಯ ಮೂಲಕ ವಿಶ್ವವಿದ್ಯಾಲಯಕ್ಕೆ ಪರೀಕ್ಷಾ ಶುಲ್ಕ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು.

ಅ. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಆ. **S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.** ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು / ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ:23-06-2012ರಲ್ಲಿ ತಿಳಿಸಿರುತ್ತಾರೆ. ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ವಿಭಾಗಕ್ಕೆ ಒಪ್ಪಿಸಬೇಕು.

3. **ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.**
4. **ಪರೀಕ್ಷೆಗೆ ವಿದ್ಯಾರ್ಥಿಗಳು ಪಾವತಿಸುವ ಶುಲ್ಕವನ್ನು ಯಾವುದೇ ಕಾರಣಕ್ಕಾಗಿ ಹಿಂದಿರುಗಿಸಲಾಗುವುದಿಲ್ಲ.**

## ಕೋ-ಆರ್ಡಿನೇಟರ್‌ರವರಿಗೆ ಸೂಚನೆಗಳು

1. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿ ಸಲ್ಲಿಸಿದ ಚಲನ್‌ನ್ನು ಪರಿಶೀಲಿಸಿ ಕೊನೆ ದಿನಾಂಕದಿಂದ ಎರಡು ದಿನದೊಳಗಾಗಿ ಕೋ-ಆರ್ಡಿನೇಟರ್ ಮೇಲುಸಹಿಯೊಂದಿಗೆ ಚಲನ್ ಪ್ರತಿ ಹಾಗೂ ಇತರೆ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ನಂತರ ಕಳುಹಿಸುವ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ.

2. **ಕುಲಸಚಿವ(ಆಡಳಿತ)/ಶೈಕ್ಷಣಿಕ ವಿಭಾಗದಿಂದ ಪ್ರವೇಶಾತಿ ಅನುಮೋದನೆಯಾಗದೇ ಹಾಗೂ ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.** ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ

ಸಂಖ್ಯೆಗಿಂತ ಹೆಚ್ಚುವರಿಯಾಗಿ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.

3. ಹಾಜರಾತಿ ಕೊರತೆ ಇರುವಂತಹ ಹಾಗೂ ಪ್ರವೇಶಾನುಮೋದನೆಯಾಗದೆ ವಿದ್ಯಾರ್ಥಿಗಳ ಪಟ್ಟಿಯನ್ನು ಪರೀಕ್ಷೆಗಳು ಆರಂಭವಾಗುವ 15 ದಿನ ಮುಂಚಿತವಾಗಿ ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸುವುದು. ಒಂದು ವೇಳೆ ಹಾಜರಾತಿ ಕೊರತೆ ಹಾಗೂ ಪ್ರವೇಶಾನುಮೋದನೆಯಾಗದೇ ಇರುವ ವಿದ್ಯಾರ್ಥಿಗಳು ಮುಂದಿನ ಸೆಮಿಸ್ಟರ್‌ಗೆ ಅರ್ಹತೆಯಿಲ್ಲದೆ ಪರೀಕ್ಷಾ ಅರ್ಜಿ ಸಲ್ಲಿಸಿದ್ದಲ್ಲಿ/ಪರೀಕ್ಷೆ ತೆಗೆದುಕೊಂಡಲ್ಲಿ ಮುಂದಿನ ಎಲ್ಲಾ ತರಹದ ತೊಂದರೆಗಳಿಗೆ ವಿಭಾಗದ ಮುಖ್ಯಸ್ಥರೆ ನೇರ ಜವಾಬ್ದಾರರಾಗಿರುತ್ತಾರೆ.

4. S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.

5. **ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ** Freshers **ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್.2011 ಬೆಂಗಳೂರು ದಿನಾಂಕ: 23-06-2012ರಲ್ಲಿ ತಿಳಿಸಿರುತ್ತಾರೆ.**

6. **ಪ್ರಾಯೋಗಿಕ ಪರೀಕ್ಷೆಗೆ / ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿಗಳನ್ನು ದಿನಾಂಕ: 09-11-2022ರೊಳಗಾಗಿ ಶ್ರೀ ಸುಬ್ರಮಣ್ಯ ಹೆಚ್. ಎನ್., ಶಾಖಾಧಿಕಾರಿಗಳು, ಲೆಕ್ಕ ಶಾಖೆ, ಪರೀಕ್ಷಾ ವಿಭಾಗ ಇವರಿಗೆ ತಲುಪಿಸಲು ಸೂಚಿಸಿದೆ. (ಹೆಚ್ಚಿನ ಮಾಹಿತಿಗೆ 6361529618 ಸಂಪರ್ಕಿಸಬಹುದು.)**

7. **ಪ್ರಶ್ನೆ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ದಿನಾಂಕ:09-11-2022ರೊಳಗೆ ಸಲ್ಲಿಸುವುದು. ಸದರಿ ಪ್ರಶ್ನೆಪತ್ರಿಕೆ ಬೇಡಿಕೆ ಪಟ್ಟಿಯನ್ನು ಪರಿಶೀಲಿಸಿ, ದಿನಾಂಕ: 09-11-2022ರೊಳಗೆ ಸರಿ ಇದೆಯೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಶ್ರೀ ಸಿದ್ಧಲಿಂಗ ಜಿ. ಪಾಟೀಲ್, ಶಾಖಾಧಿಕಾರಿಗಳು, ದೂರವಾಣಿ ಸಂಖ್ಯೆ: 94818 77505, (ಪರೀಕ್ಷಾಂಗ), ರಹಸ್ಯ ವಿಭಾಗ, ಇವರಿಗೆ ತಿಳಿಸಲು ಸೂಚಿಸಿದೆ.**

8. ವಿಶ್ವವಿದ್ಯಾಲಯವು ಆಂತರಿಕ ಕಿರುಪರೀಕ್ಷೆಯ ಉತ್ತರ ಪತ್ರಿಕೆ (ಬ್ಲೂ ಬುಕ್)ಗಳನ್ನು ಹಿಂಪಡೆಯುವುದರಿಂದ ಸೈದ್ಧಾಂತಿಕ ಪರೀಕ್ಷೆ ಪ್ರಾರಂಭಕ್ಕೆ ಮುಂಚೆ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳಿದ್ದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ತದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

9. ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ವಿಭಾಗದಲ್ಲಿಯೇ ಆರು ತಿಂಗಳುಗಳ ಕಾಲ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

10. ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಬಿಟ್ಟುಹೋದಲ್ಲಿ (Monitoring committeeಯಲ್ಲಿ ಪರಿಶೀಲಿಸಿ Freeze ಮಾಡಿದ ನಂತರ) ಯಾವುದೇ ಕಾರಣಕ್ಕೂ ಹಾರ್ಡ್‌ಕಾಪಿಯನ್ನು ನಂತರ ವಿಭಾಗದಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

5.11.22

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ,
ಶಂಕರಘಟ್ಟ - 577 451

***ಇವರಿಗೆ,***

01 ಕೋ-ಆರ್ಡಿನೇಟರ್, ಸ್ನಾತಕ ದೈಹಿಕ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
02 ಡಾ. ಸೈಯದ್ ಅಶ್ಫಕ್ ಅಹಮದ್, ಪ್ರಾಧ್ಯಾಪಕರು/ನೋಡಲ್ ಅಧಿಕಾರಿಗಳು, ಸ್ನಾತಕೋತ್ತರ ಭೂ ವಿಜ್ಞಾನ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
03 ವ್ಯವಸ್ಥಾಪಕರು, ಮೆ॥ ಲಾಜಿಸಿಸ್ ಸಂಸ್ಥೆ, @ ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

**ಪ್ರತಿಗಳು:**

1. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಸಂಚಾಲಕರು, ಎಸ್.ಸಿ/ಎಸ್.ಟಿ. ಸೆಲ್,/ ಓ.ಬಿ.ಸಿ. ಸೆಲ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಶಾಖಾಧಿಕಾರಿಗಳು/ಕಂಪ್ಯೂಟರ್ ಪ್ರೋಗ್ರಾಮರ್, ಪರೀಕ್ಷಾ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಆಪ್ತಶಾಖೆ :- ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8. ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ಕಛೇರಿ ಪ್ರತಿ.